SRI AZEEZ SAIT :—Four Non-Stop trips between Bangalore and Kanakapura and one Non-stop Trip from Bangalore to Malavalli.

ಶ್ರೀ ಟಿ. ಎಂ. ಮಂಜುನಾಥ್ :—ಬಸ್ಸುಗಳು ತಡವಾಗಿಯೇ ಹೊರಡುತ್ತಿರುವುದರಿಂದ ಇದನ್ನು ತ್ವರಿತವಾಗಿ ಸುಧಾರಿಸಲು ಸರಕಾರ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಅಜೀಜ್ ಸೇಟ್ :—ಸಾಕಷ್ಟು ಎಚ್ಚರಿಕೆ ಕೊಡಲಾಗಿದೆ. ಇನ್ನು ಮುಂದೆ ಆಗುವುದಿಲ್ಲ ಎಂದು ಇದೆ.

ಶ್ರೀ ಕೆ ಎನ್. ವೀರಪ್ಪಗೌಡ :—ಬಸ್ಸುಗಳು ಟೈಂಗೆ ಸರಿಯಾಗಿ ಓಡುವುದೇ ಇಲ್ಲ. ಬಸ್ ಸ್ಟ್ಯಾಂಡಿಗೆ ಹೋದರೆ ಬಸ್ಸು ಎಂಟು ಗಂಟೆಗೆ ಹೊರಡುವುದಾಗಿದ್ದರೆ ಆ ಬಸ್ಸು ಸ್ಟ್ಯಾಂಡಿಗೆ ಎಂಟೂವರೆ ಗಂಟೆಗೆ ಬರುತ್ತದೆ ಮತ್ತು ಬಸ್ಸುಗಳಿಗೆ ಅರ್ಧಗಂಟೆ ಮುಂಚೆ ಟಿಕೆಟ್ಟು ಬೇಕೆಂದು ಕೇಳಿದರೂ ಕೊಡುವುದಿಲ್ಲ ಬಸ್ಸುಗಳು ಬರಲಿ ಬಂದ ಮೇಲೆ ಕೊಡುತ್ತೇವೆ ಎಂದು ಹೇಳುತ್ತಾರೆ. ೮ ಗಂಟೆ ಬಸ್ಸು ಎಂಟೂವರೆಗೆ ಬಂದರೆ ಆ ನಂತರ ಟಿಕೆಟ್ಟು ಕೊಟ್ಟು ಹೊರಡಬೇಕಾದರೆ ಒಂದು ಗಂಟೆ ಕಾಲ ತಡವಾಗುತ್ತದೆ. ಇವೆಲ್ಲಾ ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್ :—ಇದು ಆಗದ ಹಾಗೆ ಈಗ ಸಾಕಷ್ಟು ಎಚ್ಚರಿಕೆ ಸೂಚನೆಗಳನ್ನು ಕೊಡ ಲಾಗಿದೆ ಮತ್ತು ಹಿಂದೆ ಆಗುತ್ತಿದ್ದ ಹಾಗೆ ತಡವಾಗುತ್ತಿಲ್ಲ. ಸಾಕಷ್ಟು ಎಚ್ಚರಿಕೆ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್ :—ಬಸ್ಸುಗಳು ಡಿಪೋ ಬಿಡುವ ಮುನ್ನ ಇಲ್ಲಿರುವ ಕಂಟ್ರೋಲಿಂಗ್ ಆಫೀಸರುಗಳು ಎಂದರೆ ಇಂಜನೀಯರು ಇತ್ಯಾದಿ ಅಧಿಕಾರಗಳಿಗೆ ಇಂತಿಷ್ಟೇ ಕಾಲದಲ್ಲಿ ಬಸ್ಸುಗಳನ್ನು ಸ್ಟ್ಯಾಂಡಿಗೆ ಹೊರಡಿಸಬೇಕು ಎಂದು ಸರಿಯಾಗಿ ಸೂಚನೆಗಳನ್ನು ಕೊಡುತ್ತಿಲ್ಲ. ಇದರಿಂದ ಬಹಳ ಜನಕ್ಕೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿಯೇ ?

SRI AZEEZ SAIT.—All that the member has been saying has come to my notice. I have instructed that the Divisional Controller should invite all the M.L.As. to the respective Depots immediately after the Assembly Session is over and hold discussions with them. Such discussions are to be held once in three months. We have also decided to fix the responsibility on the Head of the Division for the irregularities, if any, in the timings. Now, to a certain extent, there is improvement, though I do not claim that it has improved cent per cent. I admit it requires further improvement. Necessary steps will be taken.

9.30 P.M.

ಶ್ರೀ ಎಚ್. ಪುಟ್ಟದಾಸ.—ಈ ಮಾರ್ಗ ರಾಷ್ಟ್ರೀಕರಣವಾದಮೇಲೆ ೫೦ ಖಾಸಗಿ ಕಾರುಗಳು ಓಡಾಡುತ್ತಿವೆ. ಇದನ್ನು ತಪ್ಪಿಸುವುದಕ್ಕೆ ಈ ಮಾರ್ಗದಲ್ಲಿ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗುವುದಿಲ್ಲವೇ?

SRI AZEEZ SAIT.—One or two more buses require to be put on that line. Immediately we get the chassis we have already ordered, certainly we will put it.

DEVELOPMENT OF KODACHADRI, ETC., AS TOURIST CENTRES IN THIRTHAHALLI CONSTITUENCY

546. SRI KONANDUR LINGAPPA (Thirthahally).—Will the Minister for Labour be pleased to state.—

whether the Government have prepard any scheme to develop Kodachadri, Kavaledurga, Agumbe and Ambuthirtha of Thirthahalli cnstituency as tourist centres?

SRI AZEEZ SAIT (Minister for Labour).—No scheme is prepared at present to develop all these areas. But the State Tourist Development Corporation have thought of developing Agumbe in their 1971-74 programme. Ambuthirtha and Kavaledurga being important pilgrimage centres, are not attracting enough tourists.

ಶ್ರಿ ಕೋಣಂದೂರು ಲಿಂಗಪ್ಪ.—ಕೊಡಚಾದ್ರಿ ಬಗ್ಗೆ ಉತ್ತರದಲ್ಲಿ ಏನೂ ಹೇಳಿಲ್ಲ. ಇದಕ್ಕೆ ಕಾರಣವೇನು ?

‡SRI AZEEZ SAIT.—Kodachadri is a beautifull hill station in Shimoga District, in Western Ghats and it is 21 miles from Hosanagar. It is 55,41 ft. above sea level. It is located in green forest. We have taken that into our plan.

ಶ್ರೀ ಕೋಣಾಂದೂರು ಲಿಂಗಪ್ಪ.—ಕೊಡಚಾದ್ರಿ ಮತ್ತು ಆಗುಂಬೆಯನ್ನು ಪ್ರವಾಸಿ ಕೇಂದ್ರಗಳಾಗಿ ಮಾಡೇವ ಯೋಜನೆ ಕಾರ್ಯಗತವಾಗುವುದು ಮತ್ತು ಪೂರೈಸುವುದು ಎಷ್ಟು ಕಾಲದಲ್ಲಿ ?

ಶ್ರೀ ಅಜೀಜ್ ಸೇಟ್.— ಐದು ವರ್ಷದ ಯೋಜನೆಯಲ್ಲಿ ತೆಗೆದುಕೊಂಡಿದ್ದೇವೆ. ಹಣಕಾಸು ಒದಗುವುದನ್ನು ನೋಡಿಕೊಂಡು ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಂಬುತೀರ್ಥ ಮತ್ತು ಕವಲೆದುರ್ಗ ಸಾಕಷ್ಟು ಪ್ರವಾಸಿಗಳನ್ನು ಆಕರ್ಷಿಸುತ್ತಿಲ್ಲ ಎಂದು ಹೇಳಿದ್ದಾರೆ. ಅಲ್ಲಿ ಯಾವ ಅಭಿವೃದ್ಧಿಯನ್ನೂ ಮಾಡದೆ ಇದ್ದುದರಿಂದ ಅಲ್ಲಿಗೆ ಸಾಕಷ್ಟು ಪ್ರವಾಸಿಗರು ಬರುತ್ತಿಲ್ಲ ಎನ್ನುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ?

ಶ್ರೀ ಅಜೀಜ್ ಸೇಟ್.—ಭಕ್ತರಿಗೋಸ್ಕರ ಇರುವ ಜಾಗದಲ್ಲಿ ಇಷ್ಟೆಲ್ಲ ಅನುಕೂಲಗಳು ಇದ್ದರೆ ಭಕ್ತರು ಭಕ್ತರಾಗಿರುವುದಿಲ್ಲ.

SITE FOR THE CONSTRUCTION OF A BUS STAND AT MANGALORE

530. SMT. ADDY SALDANHA (Mangalore).—Will the Minister for Labour be pleased to state.—

the progress made in respect of selection of site for constructing of a bus stand at Mangalore ?

SRI AZEEZ SAIT (Minister for Labour).— Preliminary inspection of available sites suitable for location of a Bus-stand has been made by the Mysore State Road Transport Corporation. A further inspection to finalise the same is being undertaken shortly by a Committee nominated by the Corporation.

SMT ADDY SALDANHA.— Will the Hon'ble Minister be able to tell me when these inspections will be finalised?